S. C. No. 10/2019
PW.34

**ಎಸ್.ಸಿ. ನಂ.10/2019**

**ದೋ.ಸಾ. : 44 ಪ್ರಾ.ಸಾ. : 34**

**ದಿನಾಂಕಃ 22-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

5. ಸಾಕ್ಷಿಯು ಕಾಳೀ ನದಿಯ ಗಣೇಶಗುಡಿ ಸೇತುವೆಯ ಬಳಿ ಮಾಡಿದ ಪಂಚನಾಮೆಯ ಕಾಲದಲ್ಲಿ ತೆಗೆದ ಫೋಟೊವನ್ನು ಸಾಕ್ಷಿಯು ಈಗ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-4 ಮತ್ತು 5 ಎಂದು, 3 ನೇ ಆರೋಪಿಯ ಮನೆಯ ಬಳಿ ಪಂಚನಾಮೆಯ ಕಾಲಕ್ಕೆ ತೆಗೆದ ಫೋಟೊವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-6 ಎಂದು, 2 ನೇ ಆರೋಪಿಯ ಮನೆಯ ಬಳಿ ಪಂಚನಾಮೆಯ ಕಾಲಕ್ಕೆ ತೆಗೆದ ಫೋಟೊವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-8 ಎಂದು ಗುರುತಿಸಲಾಗಿರುತ್ತದೆ.

6. 2 ನೇ ಆರೋಪಿಯು ತನ್ನ ಸ್ವ-ಖುಷಿ ಹೇಳಿಕೆಯಲ್ಲಿ ತಾನು ಬೆಳಗಾವಿಯ ಖಾನಾಪುರದ ಪಣಜಿ ರಸ್ತೆಯಲ್ಲಿರುವ ಇಂಡಿಯನ್ ಗ್ಯಾರೇಜಿನ ಹತ್ತಿರ ಕೃತ್ಯಕ್ಕೆ ಬಳಸಿದ ವಾಹನವನ್ನು ಸದರಿ ಗ್ಯಾರೇಜಿನ ಹತ್ತಿರ ಇಟ್ಟಿದ್ದು, ಅದನ್ನು ತೋರಿಸುವುದಾಗಿ ಹೇಳಿದ್ದರಿಂದ, ತನಿಖಾಧಿಕಾರಿಗಳು, ನಾನು ಮತ್ತು ನಮ್ಮ ಇತರೇ ಸಿಬ್ಬಂದಿಗಳಾದ ಸಿಪಿಸಿ-1618/ಮಂಜು ಗೊಂಡ, ಸಿಪಿಸಿ-952/ಮುರಳೀಧರ ನಾಯ್ಕ ಮತ್ತು 2 ಮತ್ತು 3 ನೇ ಆರೋಪಿತರು ದಿ.27-10-2018 ರಂದು ಖಾನಾಪುರಕ್ಕೆ ಹೋಗಿ, ಅಲ್ಲಿನ ವನಮಾಲಾ ಹೊಟೇಲಿನ ಬಳಿ ತನಿಖಾಧಿಕಾರಿಗಳು ಇಬ್ಬರು ಪಂಚರನ್ನು ಬರಮಾಡಿಕೊಂಡು, ಅವರಿಗೆ ಪ್ರಕರಣದ ಬಗ್ಗೆ ತಿಳಿಸಿ ನಂತರ 2 ನೇ ಆರೋಪಿಯು ಹೇಳಿದ ಸ್ಥಳವಾದ ಪಣಜಿ ರಸ್ತೆಯಲ್ಲಿರುವ ಇಂಡಿಯನ್ ಗ್ಯಾರೇಜಿನ ಮುಂದಿನ ರಸ್ತೆಯ ನಂತರದ ಖಾಲಿ ಜಾಗದಲ್ಲಿ, 2 ನೇ ಆರೋಪಿ ತಾನು ಕೃತ್ಯಕ್ಕೆ ಬಳಸಿದ ಮಾರುತಿ ಜೆನ್ ಕಾರನ್ನು ತೋರಿಸಿದಂತೆ, ತನಿಖಾಧಿಕಾರಿಗಳು ಸ್ಥಳದಲ್ಲಿ ಹಾಜರಿದ್ದ ಗ್ಯಾರೇಜಿನ ಮಾಲೀಕರಾದ ಚಾಸಾ-32 ಹಾಗೂ ಪಂಚರ ಸಮಕ್ಷಮ ಕಾರನ್ನು ಪರಿಶೀಲಿಸಿದಾಗ, ಕಾರಿನ ಒಳಗಡೆ ಡ್ಯಾಶ್ ಬೋರ್ಡಿನ ಒಳಗೆ ಲ್ಯಾಮಿನೇಟ್ ಮಾಡಿದ ಮಾಧವ ಗುಜ್ಜರ್ ರವರ ಹೆಸರಿನಲ್ಲಿರುವ ಒಂದು ಆರ್.ಸಿ. ಕಾರ್ಡ್ ಮತ್ತು ಎರಡು ಲಕೋಟೆಗಳು ಇದ್ದವು. ಸದರಿ ಲಕೋಟೆಗಳ ಮೇಲೆ ಮಾರುತಿ ಟ್ರ್ಯೂ ವ್ಯಾಲ್ಯು, ಶಾಂತೇಶ್ ಮೋಟಾರ್ಸ್, ಬೆಳಗಾವಿ ಎಂದು ನಮೂದಾಗಿದ್ದು, ಒಂದನೇ ಲಕೋಟೆಯ ಒಳಗಡೆ pre owned car booking

commitment checklist ಎಂದು ಬರೆದಿರುವ ಒಂದು ಕಾಗದ ಪತ್ರ,ಇದ್ದು, ಅದರ ಮೇಲಿನ ಕಸ್ಟಮರ್ ಕಾಲಂ ನಲ್ಲಿ 2 ನೇ ಆರೋಪಿಯ ಹೆಸರು, ವಿಳಾಸ, ಮೊಬೈಲ್ ನಂಬರು ಮತ್ತು ವಾಹನದ ಸಂಖ್ಯೆ ಎಂ.ಹೆಚ್–04/ಬಿಕೆ–0726 ಹಾಗೂ ಇತರೇ ಮಾಹಿತಿ ನಮಾದಿರುತ್ತದೆ. ಹಾಗೂ ಅದರಲ್ಲಿ ಕಸ್ಟಮರ್, ಸೇಲ್ಸ್ ಎಕ್ಸಿಕ್ಯೂಟಿವ್ ಮತ್ತು ಮ್ಯಾನೇಜರ್ ರವರ ಸಹಿಗಳಿರುತ್ತವೆ. ಅದೇ ಲಕೋಟೆಯಲ್ಲಿ ವಾಹನದ ಎನ್.ಓ.ಸಿ. ಗೆ ಸಂಬಂಧಿಸಿದ ದಾಖಲೆಗಳು ಹಾಗೂ Form–29 and Form–30 ಇದ್ದು, ಅವುಗಳಲ್ಲಿ ಮಾಧವ ಗುಜ್ಜರ್ ರವರ ಸಹಿ ಇರುತ್ತದೆ.

7. ಇನ್ನೊಂದು ಲಕೋಟೆಯಲ್ಲಿ ಸದರಿ ಕಾರಿನ ಇನ್ಶೂರೆನ್ಸ್ ಪ್ರತಿ, ಹೊಗೆ ತಪಾಸಣಾ ಪತ್ರ ಮತ್ತು 2 ನೇ ಆರೋಪಿಯ ಹೆಸರಿನಲ್ಲಿರುವ ಕ್ಯಾಶ್ ರಶೀದಿಗಳು ಇದ್ದವು. ನಂತರ ಸದರಿ ಕಾರಿನ ಚಾಲಕ ಪಕ್ಕದ ಸೀಟಿನ ಹಿಂಬದಿಯಲ್ಲಿರುವ ಜಿಪ್ ನಲ್ಲಿ ಗೋವಾ ಸ್ಪೆಷಲ್ ಕೋಕೋನಟ್ ಪೆನ್ನಿ ಎಂದು ಇರುವ ಸಾರಾಯಿ ಬಾಟಲಿಯಿದ್ದು, ಅದರ ಮೇಲೆ ಕಂದು ಬಣ್ಣದ ರಕ್ತದ ಕಲೆ ಕಂಡುಬಂದಿರುತ್ತದೆ. ಈ ಮೇಲೆ ಹೇಳಿದ ಎಲ್ಲಾ ದಾಖಲೆಗಳನ್ನು ಮತ್ತು ಸಾರಾಯಿ ಬಾಟಲಿಯನ್ನು ಮತ್ತು ಕಾರನ್ನು ತನಿಖಾಧಿಕಾರಿಗಳು ಪಂಚರ ಸಮಕ್ಷಮ ಜಪ್ತುಪಂಚನಾಮೆ ಮಾಡಿ, ಜಪ್ತುಪಡಿಸಿಕೊಂಡರು. ಸದರಿ ಪಂಚನಾಮೆಯನ್ನು ಪಂಚರು ಹೇಳಿದಂತೆ ತನಿಖಾಧಿಕಾರಿಯ ಉಕ್ತಲೇಖನದಂತೆ ನಾನು ಲ್ಯಾಪ್–ಟಾಪ್ ನ ಮೂಲಕ ಗಣಕೀಕರಿಸಿ, ಪ್ರಿಂಟ್ ಮಾಡಿ, ಸಹಿ ಮಾಡಿ ತನಿಖಾಧಿಕಾರಿಗೆ ನೀಡಿರುತ್ತೇನೆ. ಸದರಿ ಪಂಚನಾಮೆಯ ಕಾಲಕ್ಕೆ ತನಿಖಾಧಿಕಾರಿಗಳು ಫೋಟೊ ತೆಗೆದಿರುತ್ತಾರೆ. ಸಾಕ್ಷಿಯು ತಾನು ಗಣಕೀಕರಿಸಿದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–34 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–34(ಸಿ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಆವರಣದಲ್ಲಿರುವ ಜೆನ್ ಕಾರನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಓ–11 ಎಂದು ಗುರುತಿಸಲಾಗಿದೆ. ಪಂಚನಾಮೆಯ ಸಮಯದಲ್ಲಿ ತೆಗೆದ ಫೋಟೊಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–35 ಮತ್ತು 36 ಎಂದು ಗುರುತಿಸಲಾಗಿದೆ. ನಿಪಿ–35 ಫೋಟೊದಲ್ಲಿ ಕಾಣುತ್ತಿರುವ ಕಾರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಪಂಚನಾಮೆಯ ಕಾಲಕ್ಕೆ ಜಪ್ತುಪಡಿಸಿಕೊಂಡ ವಾಹನದ ಆರ್.ಸಿ. ಕಾರ್ಡನ್ನು ಹಾಗೂ ಇತರೇ ದಾಖಲೆಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಆರ್.ಸಿ. ಕಾರ್ಡನ್ನು

ಈಗಾಗಲೇ ನಿಪಿ–37 ಎಂದು, ಇತರೇ ದಾಖಲೆಗಳನ್ನು ಒಟ್ಟಾಗಿ ನಿಪಿ–38 ಎಂದು ಗುರುತಿಲಾಗಿದೆ. ಸಾರಾಯಿ ಬಾಟಲಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಓ–13 ಎಂದು ಗುರುತಿಸಲಾಗಿದೆ.

8. ಸದರಿ ಪಂಚನಾಮೆಯ ನಂತರ, ಇಂಡಿಯನ್ ಗ್ಯಾರೇಜಿನ ಮಾಲೀಕರಾದ ಚಾಸಾ–32 ರವರು ನಮ್ಮನ್ನು ತಮ್ಮ ಗ್ಯಾರೇಜಿನ ಬಳಿ ಕರೆದುಕೊಂಡು ಹೋಗಿ, ಈ ಪ್ರಕರಣದ 1 ನೇ ಆರೋಪಿ ತನ್ನೊಂದಿಗೆ ಮೊಬೈಲಿನಲ್ಲಿ ಮಾತನಾಡಿದ ಸಂಭಾಷಣೆಯು ರೆಕಾರ್ಡ್ ಆಗಿರುವುದನ್ನು ಕೇಳಿಸಿ, ಸದರಿ ಮೊಬೈಲನ್ನು ತನಿಖಾಧಿಕಾರಿಗಳಿಗೆ ನೀಡಿದ್ದು, ತನಿಖಾಧಿಕಾರಿಯ ಸೂಚನೆಯ ಮೇರೆಗೆ ನಾನು ಮೊಬೈಲನ್ನು ಪರಿಶೀಲಿಸಿದಾಗ, ದಿ.20–10–2018 ರಂದು 1 ನೇ ಆರೋಪಿಯು ಚಾಸಾ–38 ರವರಿಗೆ ಕರೆ ಮಾಡಿ, ಮಾತನಾಡಿರುವುದು ಕಂಡುಬಂದಿರುತ್ತದೆ ಹಾಗೂ ಸದರಿ ಕರೆಯ ಸಂಭಾಷಣೆಯನ್ನು ಕೇಳಿಸಿಕೊಂಡಾಗ, ಅದರಲ್ಲಿ ಇಬ್ಬರು ವ್ಯಕ್ತಿಗಳು ಮಾತನಾಡಿರುವುದು ಕೇಳಿಬಂದಿರುತ್ತದೆ, ಆಗ ಚಾಸಾ–32 ರವರು ಸದರಿ ಕರೆಯಲ್ಲಿ ತಾನು ಹಾಗೂ 1 ನೇ ಆರೋಪಿ ಮಾತನಾಡಿರುತ್ತೇವೆ ಎಂದು ತಿಳಿಸಿದ್ದು, ನಂತರ ನಾನು ಸದರಿ ಮೊಬೈಲನ್ನು ಡೇಟಾ ಕೇಬಲ್ ಮೂಲಕ ಲ್ಯಾಪ್–ಟಾಪ್ ಗೆ ಅಳವಡಿಸಿ, ಸದರಿ ಕರೆಯ ಸಂಭಾಷಣೆಯನ್ನು ಲ್ಯಾಪ್–ಟಾಪ್ ಗೆ ವರ್ಗಾಯಿಸಿಕೊಂಡು, ನಂತರ ಅದನ್ನು ಒಂದು ಸಿ.ಡಿ.ಗೆ ಭರಣ ಮಾಡಿ, ಸದರಿ ಸಿ.ಡಿ.ಯನ್ನು ತನಿಖಾಧಿಕಾರಿಗೆ ನೀಡಿರುತ್ತೇನೆ. ಸದರಿ ಸಿ.ಡಿ.ಯನ್ನು ತನಿಖಾಧಿಕಾರಿಗಳು ಪಂಚರು ಮತ್ತು ಚಾಸಾ–32 ರವರ ಸಮಕ್ಷಮ ಜಪ್ತುಪಡಿಸಿಕೊಂಡಿದ್ದು, ಆ ಕಾಲಕ್ಕೆ ಪಂಚರು ಹೇಳಿದಂತೆ ತನಿಖಾಧಿಕಾರಿಯ ಉಕ್ತಲೇಖನದಂತೆ ನಾನು ಪಂಚನಾಮೆಯನು ಲ್ಯಾಪ್–ಟಾಪ್ ಮೂಲಕ ಗಣಕೀಕರಿಸಿ, ಪ್ರಿಂಟ್ ಮಾಡಿ ಸಹಿ ಮಾಡಿ ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಸಾಕ್ಷಿಯು ಗಣಕೀಕರಿಸಿದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–39 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–39(ಸಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕಾಲಕ್ಕೆ ಜಪ್ತುಪಡಿಸಿಕೊಂಡ ಸಿ.ಡಿ.ಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ–40 ಎಂದು ಗುರುತಿಸಲಾಗಿದೆ.

9. 2 ಮತ್ತು 3 ನೇ ಆರೋಪಿತರು ತಮ್ಮ ಸ್ವ–ಖುಷಿ ಹೇಳಿಕೆಯಲ್ಲಿ, ತಾವು ಕೃತ್ಯಕ್ಕೆ ಬಳಸಿದ ಕತ್ತಿಗಳನ್ನು ಖರೀದಿಸಿದ ಸ್ಥಳಗಳನ್ನು ತೋರಿಸುವುದಾಗಿ ಹೇಳಿದಂತೆ, ದಿ.28–10–2018

ರಂದು ತನಿಖಾಧಿಕಾರಿಯು ಇಬ್ಬರು ಪಂಚರನ್ನು ಬರಮಾಡಿಕೊಂಡು, ನಮ್ಮನ್ನು ಹಾಗೂ ಪಂಚರನ್ನು, 2 ನೇ ಆರೋಪಿ ಕರೆದುಕೊಂಡು ಹೋಗಿ ತೋರಿಸಿದ ಸ್ಥಳವಾದ ಕಾರವಾರದ ಬಜಾರ್ ನಲ್ಲಿರುವ ಅರವಿಂದ್ ಶ್ಯಾನುಭಾಗ್/ಚಾಸಾ-31 ರವರ ಅಂಗಡಿಯನ್ನು ಪರಿಶೀಲಿಸಿ, ಸದರಿ ಅಂಗಡಿಯಲ್ಲಿದ್ದ ಅರವಿಂದ್ ಶ್ಯಾನುಭಾಗ್ ರವರಿಗೆ ಪ್ರಕರಣದ ಬಗ್ಗೆ ಮಾಹಿತಿ ನೀಡಿದ್ದು, ಅಲ್ಲಿ 2 ನೇ ಆರೋಪಿಯು, ತಾನು ಇದೇ ಅಂಗಡಿಯಲ್ಲಿ ಕತ್ತಿಯನ್ನು ಖರೀದಿ ಮಾಡಿದ್ದಾಗಿ ಹೇಳಿದ್ದು, ತನಿಖಾಧಿಕಾರಿಯು ಪಂಚರ ಸಮಕ್ಷಮ ಪಂಚನಾಮೆ ಮಾಡಿದ್ದು, ಪಂಚರು ಹೇಳಿದಂತೆ ತನಿಖಾಧಿಕಾರಿಯ ಉಕ್ತಲೇಖನದಂತೆ ನಾನು ಪಂಚನಾಮೆಯನು ಲ್ಯಾಪ್-ಟಾಪ್ ಮೂಲಕ ಗಣಕೀಕರಿಸಿರುತ್ತೇನೆ. ಆ ಸಮಯದಲ್ಲಿ ತನಿಖಾಧಿಕಾರಿಯು ಛಾಯಾಚಿತ್ರಗಳನ್ನು ತೆಗೆಸಿರುತ್ತಾರೆ.

10. ಆ ನಂತರ 2 ಮತ್ತು 3 ಆರೋಪಿತರು ತಾವು ಇನ್ನೊಂದು ಕತ್ತಿಯನ್ನು ಉಳವಿಯ ಕುಂಭಾರವಾಡದಲ್ಲಿ ಖರೀದಿ ಮಾಡಿದ್ದಾಗಿ ಹೇಳಿ, ಸದರಿ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿದ ಮೇರೆಗೆ ತನಿಖಾಧಿಕಾರಿಯು ನಮ್ಮನ್ನು ಹಾಗೂ ಪಂಚರನ್ನು 2 ಮತ್ತು 3 ನೇ ಆರೋಪಿತರು ಕುಂಭಾರವಾಡಕ್ಕೆ ಕರೆದುಕೊಂಡು ಹೋಗಿ, ಚಾಸಾ-29 ರವರ ಮನೆಯನ್ನು ತೋರಿಸಿ, ತಾವು ಇದೇ ಮನೆಯಲ್ಲಿ ಕತ್ತಿಯನ್ನು ಖರೀದಿಸಿದ್ದಾಗಿ ಹೇಳಿದ್ದು, ಸದರಿ ಮನೆಯಲ್ಲಿ ವಿಚಾರಿಸಿದಾಗ ಚಾಸಾ-29 ರವರು ಮನೆಯಲ್ಲಿ ಹಾಜರಿದ್ದು, ನಾವು ಅವರಿಗೆ ಪ್ರಕರಣದ ಬಗ್ಗೆ ಮಾಹಿತಿ ನೀಡಿದ್ದು, ಚಾಸಾ-29 ರವರು ನಮ್ಮ ಜೊತೆಯಲ್ಲಿದ್ದ 2 ಮತ್ತು 3 ನೇ ಆರೋಪಿತರನ್ನು ನೋಡಿ ಗುರುತಿಸಿ, ಕೆಲವು ದಿನಗಳ ಹಿಂದೆ ಇದೇ ವ್ಯಕ್ತಿಗಳು ನಮ್ಮ ಮನೆಗೆ ಬಂದು, ಒಂದು ಕಬ್ಬಿಣದ ಪಟ್ಟಿಯನ್ನು ನೀಡಿ, ಕತ್ತಿಯನ್ನು ತಯಾರಿಸಿ ನೀಡುವಂತೆ ಹೇಳಿ ಹೋಗಿರುತ್ತಾರೆ, ಆನಂತರ 3-4 ದಿನಗಳ ನಂತರ ಇದೇ ವ್ಯಕ್ತಿಗಳು ಕತ್ತಿ ಪಡೆಯಲು ಪುನಃ ನಮ್ಮ ಮನೆಗೆ ಬಂದಿದ್ದು, ಆಗ ಕತ್ತಿ ತಯಾರಾಗಿಲ್ಲದ ಕಾರಣ, ಈಗಾಗಲೇ ನಮ್ಮ ಬಳಿ ತಯಾರಿಸಿಟ್ಟ ಒಂದು ಕತ್ತಿಯನ್ನು ಖರೀದಿಸಿ ಹೋಗಿರುತ್ತಾರೆ ಎಂದು ಹೇಳಿರುತ್ತಾರೆ. ಹಾಗೂ 2 ಮತ್ತು 3 ನೇ ಆರೋಪಿತರು ಕತ್ತಿ ಮಾಡಲು ನೀಡಿದ ಕಬ್ಬಿಣದ ಪಟ್ಟಿಯನ್ನು ಚಾಸಾ-29 ರವರು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿದ್ದು, ಸದರಿ ಕಬ್ಬಿಣದ ಪಟ್ಟಿಯನ್ನು ಜಪ್ತುಪಡಿಸಿಕೊಂಡಿದ್ದು, ಅಲ್ಲಿ ಪಂಚರು ಹೇಳಿದಂತೆ ತನಿಖಾಧಿಕಾರಿಯ ಉಕ್ತಲೇಖನದಂತೆ ನಾನು ಪಂಚನಾಮೆಯನ್ನು ಲ್ಯಾಪ್-ಟಾಪ್ ಮೂಲಕ ಗಣಕೀಕರಿಸಿ, ಪ್ರಿಂಟ್ ಮಾಡಿ, ಸಹಿ

ಮಾಡಿ ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಆ ಸಮಯದಲ್ಲಿ ತನಿಖಾಧಿಕಾರಿಯು ಫೋಟೊ ಸಹ ತೆಗೆದಿರುತ್ತಾರೆ. ಸಾಕ್ಷಿಯು ಗಣಕೀಕರಿಸಿದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–56 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–56(ಸಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕಾಲಕ್ಕೆ ಜಪ್ತುಪಡಿಸಿಕೊಂಡ ಕಬ್ಬಿಣದ ಪಟ್ಟಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಓ–12 ಎಂದು ಗುರುತಿಸಲಾಗಿದೆ. ಚಾಸಾ–31 ರವರ ಅಂಗಡಿಯ ಬಳಿ ತೆಗೆದ ಫೋಟೊವನ್ನು ನಿಪಿ–42 ಎಂದು, ಹಾಗೂ ಚಾಸಾ–29 ರವರ ಮನೆಯ ಬಳಿ ತೆಗೆದ ಫೋಟೊವನ್ನು ಈಗಾಗಲೇ ನಿಪಿ–32 ಎಂದು ಗುರುತಿಸಲಾಗಿದೆ.

11. ದಿ.31–10–2018 ರಂದು ನಮ್ಮ ಠಾಣೆಯ ಸಿಬ್ಬಂದಿಯಾದ ಚಾಸಾ–47/ಸಿ.ಪಿ.ಸಿ–1618 ರವರು ಮೃತ ಪ್ರೇಮ್ ಕುಮಾರನ ಶವ ಪರೀಕ್ಷಾ ಕಾಲಕ್ಕೆ ವೈದ್ಯರು ಸಂಗ್ರಹಿಸಿದ್ದ 9 ವಸ್ತುಗಳನ್ನು ಅಂದರೆ, 4 ವಿಸೆರಾ ಮಾದರಿಗಳು, ಮೃತನ ಮೈಮೇಲಿದ್ದ ಅಂಡರ್ ವೇರ್, ಶವ ಬಿದ್ದ ಸ್ಥಳದ ಸುತ್ತಲಿನ ಮಣ್ಣು, ಶವಕ್ಕೆ ತಾಗಿದ ಮಣ್ಣು, ಡಿ.ಎನ್.ಎ. ಕುರಿತ 2 ವಸ್ತುಗಳನ್ನು ತಂದು ಹಾಜರುಪಡಿಸಿದ್ದು, ತನಿಖಾಧಿಕಾರಿಗಳು ಇಬ್ಬರು ಪಂಚರನ್ನು ಬರಮಾಡಿಕೊಂಡು, ಚಾಸಾ–47 ರವರು ಹಾಜರುಪಡಿಸಿದ ವಸ್ತುಗಳನ್ನು ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡಿದ್ದು, ಅಲ್ಲಿ ಪಂಚರು ಹೇಳಿದಂತೆ ತನಿಖಾಧಿಕಾರಿಯ ಉಕ್ತಲೇಖನದಂತೆ ನಾನು ಪಂಚನಾಮೆಯನ್ನು ಲ್ಯಾಪ್–ಟಾಪ್ ಮೂಲಕ ಗಣಕೀಕರಿಸಿ, ಪ್ರಿಂಟ್ ಮಾಡಿ, ಸಹಿ ಮಾಡಿ ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಸಾಕ್ಷಿಯು ಗಣಕೀಕರಿಸಿದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–57 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–57(ಬಿ) ಎಂದು ಗುರುತಿಸಲಾಯಿತು.

12. ದಿ.07–12–2018 ರಂದು ತನಿಖಾಧಿಕಾರಿಗಳು ಈ ಪ್ರಕರಣದ 4 ಮತ್ತು 5 ನೇ ಆರೋಪಿತರ ಸ್ವ–ಖುಷಿ ಹೇಳಿಕೆಗಳನ್ನು ಗಣಕೀಕರಿಸುವಂತೆ ಸೂಚಿಸಿದ ಮೇರೆಗೆ ಸದರಿ ಹೇಳಿಕೆಗಳನ್ನು ಗಣಕೀಕರಿಸಿ, ಪ್ರಿಂಟ್ ಮಾಡಿ ತನಿಖಾಧಿಕಾರಿಗೆ ನೀಡಿರುತ್ತೇನೆ. ಅದೇ ರೀತಿ, ತನಿಖಾಧಿಕಾರಿಯು, ಈ ಪ್ರಕರಣದ ಸಾಕ್ಷಿದಾರರಾದ ಅರವಿಂದ್ ಶ್ಯಾನುಭಾಗ್/ಚಾಸಾ–31 ಮತ್ತು ಸುರೇಶ್ ಆಚಾರಿ/ಚಾಸಾ–29, ವಿದ್ಯಾಧರ ಆಚಾರಿ/ಚಾಸಾ–30, 3 ನೇ ಆರೋಪಿಯ ಹೆಂಡತಿ ರೇಷ್ಮಾ ಯಾನೆ ಅರ್ಫಾ/ಚಾಸಾ–28 ಮತ್ತು 2 ನೇ ಆರೋಪಿಯ ಅಕ್ಕ

ಚಾಸಾ–27/ಫರ್ಜಾನಾ ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದು, ಸದರಿ ಹೇಳಿಕೆಗಳನ್ನು ಗಣಕೀಕರಿಸಿ, ಪ್ರಿಂಟ್ ಮಾಡಿ, ಸಹಿ ಮಾಡಿ ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
*Sd/-*
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ